2

# ಹನ್ನಳು

## ತಾಯ್ತನಕ್ಕೆ ಒಂದು ಸ್ಮಾರಕ

## (1:1-2:21)

ಸ್ಪಾರ್ಟನ್ ಅರಸನಾದ ಅಗೆಸಿಲಾಸ್ II (ಕ್ರಿ.ಪೂ. 444-360). ಮರಣದ ಹಾಸಿಗೆಯ ಮೇಲಿ ರುವಾಗ ತನಗಾಗಿ ಯಾವ ಪ್ರತಿಮೆಯನ್ನೂ ನಿಲ್ಲಿಸಬಾರದೆಂದು ಅಪ್ಪಣೆ ಕೊಟ್ಟನು. "ನಾನೇನಾದರೂ ಗೌರವಕ್ಕೆ ಪಾತ್ರವಾದ ಕಾರ್ಯಮಾಡಿದ್ದರೆ ಅದೇ ನನ್ನ ಸ್ಮಾರಕ. ಏನನ್ನೂ ಮಾಡಿರದೇ ಇದ್ದರೇ, ನಿಮ್ಮ ಪ್ರತಿಮೆಗಳು ಏನನ್ನೂ ಸೂಚಿಸುವದಿಲ್ಲ" ಎಂದು ಅವರು ಮುಂದುವರಿದು ಹೇಳಿ ದರು. ಇದು ಸ್ಮಾರಕಗಳ ವಿಷಯದಲ್ಲಿ ಸರಿಯಾದ ಗ್ರಹಿಕೆಯಾಗಿದೆ - ಸಂಗಮವರಿ ಕಲ್ಲುಗಳಿಂದ ನಿಲ್ಲದವುಗಳೇ ಉತ್ತಮವಾದದ್ದು! ಒಬ್ಬರ ಜೀವಿತದ ಮುದ್ರೆ ಮತ್ತು ಅವರು ಮಾತು ಮತ್ತು ಕಾರ್ಯದಲ್ಲಿ ಸಾಧಿಸಿದ ಒಳ್ಳೆಯ ಸಂಗತಿಗಳ ನೆನಪುಗಳೇ ಉತ್ತಮ ವಾದ ಸ್ಮಾರಕಗಳಾಗಿವೆ.

"ತಾಯ್ತನಕ್ಕೆ ಒಂದು ಸ್ಮಾರಕವಾದ" ತಾಯಿಯನ್ನು ಸುಂದರಳಾದ ಸ್ತ್ರೀ ಹನ್ನ ಳಲ್ಲಿ ನಾವು ಗುರುತಿಸುತ್ತೇವೆ. ಅನೇಕ ಶತಮಾನಗಳಿಂದ ಸತ್ಯವೇದದ ವಿದ್ಯಾರ್ಥಿ ಗಳು ಹನ್ನಳನ್ನು ಬಹಳವಾಗಿ ಮೆಚ್ಚುತ್ತಾರೆ. ಅವಳು - "ಪ್ರಾರ್ಥಿಸುವ ತಾಯಿ" ಅಥವಾ "ದೇವರ ದೃಷ್ಟಿಯಲ್ಲಿ ಮಾದರಿಯ ತಾಯಿ" ಎಂದು ಹೊಗಳಲ್ಪಟ್ಟಿದ್ದಾಳೆ. ನೀವು ಅವಳನ್ನು ಗಮನಿಸುವದಾದರೆ, ಪರಿಶುದ್ಧ ಬರಹಗಳಲ್ಲಿ ಅನೇಕ ದೈವಭಕ್ತ ಮಹಿಳೆಯರ ಜೊತೆಯಲ್ಲಿ ಅವಳನ್ನು ಸೇರಿಸಬಹುದು. ಬೈಬಲಿಂದ ಹನ್ನಳ ಕುರಿತು ಐತಿಹಾಸಿಕ ಸತ್ಯಗಳನ್ನು ತಿಳುಕೊಳ್ಳಬಹುದು. ಆಕೆಯು ಬಂಜೆಯಾಗಿ ಹೆಸರಿಸಲ್ಪಟ್ಟ ನಾಲ್ಕನೇಯ ಸ್ತ್ರೀ. ಈ ಸಂಖ್ಯೆಯಲ್ಲಿ ಅವಳು ಬಹಳ ಆಧ್ಯಾತ್ಮಿಕ ಮಹಿಳೆಯಾಗಿದ್ದಾಳೆ. ಸಾರಳು ನಕ್ಕಳು; ರೆಬೆಕ್ಕಳು ತಟಸ್ಥಳಾ ದಳು; ರಾಹೇಲಳು ಸಿಡಿಮಿಡಿ ಮತ್ತು ಕೋಪಗೊಂಡಳು. ನಮಗೆ ಗೊತ್ತಿರುವ ಪ್ರಕಾರ ಹನ್ನಳಾದರೋ ಪ್ರಾರ್ಥನೆಯ ಮೂಲಕ ದೈವ ಸಹಾಯವನ್ನು ಪಡೆದಳು. ಹನ್ನಳ ವಂಶಾವಳಿಯ ಕುರಿತು ನಮಗೆ ಹೆಚ್ಚು ತಿಳಿದಿಲ್ಲ. ಯಾಕೆಂದರೆ ಆಗ ಕೇವಲ ಪುರುಷರ ವಂಶಾವಳಿಯನ್ನು ನಮೂದಿಸುವ ರೂಢಿ ಇತ್ತು. ಕೇವಲ 1 ಸಮು ವೇಲ ಪ್ರಾರಂಭದ ಪುಟಗಳಲ್ಲಿ ಕಂಡು ಬಂದ ವಿಷಯದ ಹೊರತಾಗಿ ಬೇರೆ ಏನೂ ಇಲ್ಲ.

ಹನ್ನಳು ಎಲ್ಕಾನ ಮೊದಲ ಪತ್ನಿ. ಅವಳು ಬಂಜೆಯಾಗಿದ್ದುದರಿಂದ ಇನ್ನೊಬ್ಬ ಪತ್ನಿ ಸೇರಿದ್ದಳು. ದೇವರ ಮೂಲ ಯೋಜನೆಗಳಲ್ಲಿ ಈ ಹೊಂದಾಣಿಕೆ ಸೇರಿರಲಿಲ್ಲ (ಆದಿಕಾಂಡ 2:24; ಮಲಾಕಿ 2:15; ಮತ್ತಾಯ 19:4). ಎಲ್ಕಾನನ ಬಹು ಪತ್ನಿತ್ವದ ಕೆಟ್ಟ ಪರಿಣಾಮಗಳು ಸಹಜವಾಗಿದ್ದವು. ಹನ್ನಳಿಗೆ ತೋರಿದ ವಿಶೇಷ ಪ್ರೀತಿಯ ಕಾರಣ ಪೆನಿನ್ನಳು ಹೊಟ್ಟೆಕಿಚ್ಚು ಪಟ್ಟು, ಗರ್ವ ಮತ್ತು ಸೊಕ್ಕಿನಿಂದ ಮೆರೆದಳು. ಹನ್ನಳ ಬಲಹೀನತೆಯನ್ನು ಉಪಯೋಗಿಸಿ ಅವಳನ್ನು ಅಪಮಾನ ಮಾಡುತ್ತಿದ್ದಳು. ಹನ್ನಳಾದರೋ ಕೋಪದಿಂದ ತಿರುಗಿಬೀಳದೇ, ತಾಳ್ಮೆ ಯಿಂದ ಎಲ್ಲಾ ಹಿಂಸೆಗಳನ್ನು ಸಹಿಸಿದಳು. ಶಿಲೋವಿನಲ್ಲಿ ಪ್ರತಿ ವರ್ಷ ಆಚರಿಸಲ್ಪಡುವ ಯಜ್ಞದ ಸಮಯದಲ್ಲಿ ಹನ್ನಳ ದುಃಖ ಇನ್ನೂ ಹೆಚ್ಚಾಗುತ್ತಿತ್ತು. ಕಡೆಗೊಂದು ಬಾರಿ ಅವಳ ಭಾರವು ಸಹಿಸಲಾರದಷ್ಟಾಯಿತು. ಅವಳ ಮನೋವೇದನೆ, ಅಪಮಾನ ಮತ್ತು ಸ್ವದೋಷಿ ಭಾವನೆ ಹೆಚ್ಚಾಯಿತು. ಅತಿಯಾದ ವೇದನೆಯಿಂದ ಕೂಡಿದವಳಾಗಿ ಅವಳು ಯಜ್ಞದ

ಮೇಜುವಾನಿಯನ್ನು ಬಿಟ್ಟು ಆಲಯದಲ್ಲಿ ಆಶ್ರಯ ಪಡೆದಳು.

ಯೆಹೂದ್ಯರ ಪದ್ಧತಿಯ ಪ್ರಕಾರವಿದ್ದ ದೇವದರ್ಶನ ಗುಡಾರವು ಈಗ ತನ್ನ ಮಹಿಮೆಯನ್ನು ಕಳೆದುಕೊಂಡಿತು. ಮಂಜೂಷದ ಸುತ್ತಲೂ ಕೆಲವು ಪರದೆಗಳನ್ನು ಇಳಿಬಿಡಲಾಗಿತ್ತು. ಮತ್ತು ಗುಡಾರದ ಸುತ್ತಲೂ ಕಲ್ಲಿನ ಚಿಕ್ಕ ಗೋಡೆ ಹಾಳುಬಿದ್ದ ಸ್ಥಿತಿಯಲ್ಲಿ ಇತ್ತು. ಅದರ ಬಾಗಲಲ್ಲಿ ಮಹಾ ಯಾಜಕ ಏಲಿ ಕುಳಿತುಕೊಂಡಿದ್ದನು. ಹನ್ನಳು ಅಂಗವನ್ನು ಪ್ರವೇಶಿಸಿ, ಮೌನ ಪ್ರಾರ್ಥನೆಯಲ್ಲಿ ತನ್ನ ವೇದನೆಯನ್ನು ತೋಡಿಕೊಳ್ಳತೊಡಗಿದಳು. ಅವಳನ್ನು ಗಮನಿಸಿದ ಏಲಿಯು ಅವಳು ಮದ್ಯಪಾನ ಮಾಡಿದ್ದಾಳೆಂದು ನೆನೆಸಿದನು. ಏಲಿಯು ಹನ್ನಳನ್ನು ಕಠಿಣ ವಾಗಿ ಗದರಿಸಿದನು. ಆದರೆ ಹನ್ನಳು ತನ್ನ ದುಃಖಕರವಾದ ವಿವರಣೆಯನ್ನು ಕೊಟ್ಟಳು. ಹನ್ನಳ ವೇದನೆಯನ್ನು ಅರ್ಥ ಮಾಡಿಕೊಂಡ ಏಲಿ, ಅವಳ ಪ್ರಾರ್ಥನೆಗೆ ಉತ್ತರವಾಗಿ ಒಂದು ಮಗು ಹುಟ್ಟುವದೆಂದು ಹರಸಿದನು. ಗುಡಾರವನ್ನು ಬಿಟ್ಟು ಹೊರಟಾಗ ಹನ್ನಳಿಗೆ ಸಂಪೂರ್ಣ ಸಮಾಧಾನವಿತ್ತು. ತನ್ನ ದುಃಖದ ಭಾರವನ್ನು ಆಕೆಯು ದೇವರ ಕೈಗಳಲ್ಲಿ ಬಿಟ್ಟುಕೊಟ್ಟಳು. ತನಗೊಬ್ಬ ಮಗನು ಹುಟ್ಟುವನೆಂದು ಭರವಸೆಯಿಂದ ಹಿಂತಿರುಗಿದಳು. ಮಾತ್ರವಲ್ಲದೇ ಅವನನ್ನು ದೇವರಸೇವೆಗೆ ಪ್ರತಿಷ್ಠಿಸಲು ಪ್ರತಿಜ್ಞೆ ಮಾಡಿದಳು.

ಕೂಡಲೇ ಎಲ್ಕಾನನ ಬಳಿಗೆ ಹೋಗಿ ಈ ಸುದ್ದಿಯನ್ನು ಹಂಚಿಕೊಂಡಳು. ತಮ್ಮ ಪ್ರಾರ್ಥನೆಗೆ ಉತ್ತರದೊರೆಯಿತೆಂಬ ಭರವಸೆಯಿಂದ ಸಂತೋಷಿಸಿದರು. ಮಗುವು ಜನಿಸಿತು. ದೇವರ ಕೊನೆಯ ನ್ಯಾಯಸ್ಥಾಪಕ ಮತ್ತು ಮೊದಲ ಪ್ರವಾದಿ ಯಾಗುವದಕ್ಕೆ ಸಿದ್ಧನಾಗುವಂತೆ ಮೂರು ವರ್ಷಗಳವರೆಗೆ ವಿಶೇಷವಾದ ಪ್ರೀತಿಯಿಂದ ಪೋಷಿಸಲ್ಪಟ್ಟನು.

ಮೂರು ವರ್ಷಗಳ ತರುವಾಯ ವಾರ್ಷಿಕ ಹಬ್ಬದ ಸಮಯದಲ್ಲಿ ಹನ್ನಳು ತನ್ನ ಚಿಕ್ಕ ಮಗನನ್ನು ಬಿಡುವದಕ್ಕೆ ಬಂದಳು. ಅಲ್ಲಿನ ದೇವದರ್ಶನ ಗುಡಾರಕ್ಕೆ ಬಂದು ಮೂರು ವರ್ಷಗಳ ಹಿಂದೆ ತಾನೆಲ್ಲಿ ನಿಂತಿದ್ದಳೋ ಅಲ್ಲಿಯೇ ನಿಂತುಕೊಂಡಳು. ಅಂದಿನ ದುಃಖಕರ ವಾದ ನೆನಪುಗಳು ಮರುಕಳಿಸಿದವು (1:26, 27).

ಸಮುವೇಲನನ್ನು ಪ್ರತಿಷ್ಠಿಸಿದ ನಂತರ ಸ್ತೋತ್ರ ಗೀತೆಯನ್ನು ಹಾಡಿ ಯೆಹೋವ ನಿಗೆ ಕೃತಜ್ಞತೆಯನ್ನು ಸಲ್ಲಿಸಿದಳು. ದೇವರ ಕೃಪಾ ಹಸ್ತಕ್ಕೆ ತನ್ನ ಎಳೇ ಮಗನನ್ನು ಒಪ್ಪಿಸಿದಳು. ಪ್ರತಿ ವರ್ಷವೂ ಒಂದು ಬಣ್ಣ ಅಂಗಿಯನ್ನು ತಂದುಕೊಡುತ್ತಿದ್ದಳು. ಅದರ ಪ್ರತಿಯೊಂದು ಹೊಲಿಗೆ ಪ್ರೀತಿಯಿಂದ ಹೆಣೆಯಲ್ಪಟ್ಟಿತ್ತು. ತಾಯ್ತನಕ್ಕೆ ಅದ್ಭುತವಾದ ಸ್ಮಾರಕದ ಇತಿಹಾಸವಿದು!

## ಹನ್ನಳ ಸ್ಮಾರಕ

ಕೆಲವು ನಿರ್ದಿಷ್ಟವಾದ ಗುಣಗಳು ಮತ್ತು ಭಾವನೆಗಳು ಸೇರಿದಾಗಲೇ ತಾಯ್ತನಕ್ಕೆ ಅಮರವಾದ ಸ್ಮಾರಕ ಕಟ್ಟಬಹುದು.

### ದೇವರಲ್ಲಿ ನಂಬಿಕೆಯ ಗುಣ

ಸಂಶಯ ಮತ್ತು ನಿರಾಶೆಯಲ್ಲಿದ್ದಾಗ ಹನ್ನಳು ದೇವರ ಕಡೆಗೆ ತಿರುಗಿದಳು (1:9-18; 2:1-10). ಅವಳ ನಂಬಿಕೆಯು ಎಷ್ಟು ಎದ್ದು ಕಾಣುತ್ತಿತ್ತೆಂದರೆ ಅದನ್ನು ಮರೆ ಮಾಡಲು ಸಾಧ್ಯವಿರಲಿಲ್ಲ!

ಮೊದಲನೇದಾಗಿ, ದೇವರು ತನಗೆ ಮಗುವನ್ನು ಕೊಡುತ್ತಾನೆಂದು ನಂಬಿದಳು. ಸಮಯ ಕಳೆದ ಹಾಗೆ, ದುಃಖವು ಆಕೆಯ ಆತ್ಮದ ಶಕ್ತಿಯನ್ನು ಕುಂದಿಸಿತ್ತು. ಅನೇಕ ವರ್ಷಗಳ ವಿಸ್ಮಯ, ಸಂಶಯ ಮತ್ತು ಆಗಾಗ್ಗೆ ತೋರಿಬರುವ ನಿರೀಕ್ಷೆಯಿಂದಾಗಿ ಅವಳ ಕನಸುಗಳಲ್ಲಿ ನೋವಿನ ವ್ಯೂಹವೇ ನಿರ್ಮಿಸಲ್ಪಟ್ಟಿತ್ತು. ಆದಾಗ್ಯೂ ದೇವರು ಪ್ರಾರ್ಥನೆಗೆ ಉತ್ತರಿಸುವನೆಂದು ಅವಳಲ್ಲಿ ಭರವಸೆ ಹೆಚ್ಚಾಗುತಿತ್ತು (1:17). ಹನ್ನಳು ತನ್ನ ಭಾರವನ್ನು ದೇವರ ಮೇಲೆ ಹಾಕಿದಳು. ತನೇನು ಮಾಡಲು ಸಾಧ್ಯವಿತ್ತೋ ಅದನ್ನು ತಾನು ಮಾಡಿ, ತನಗೆ ನಿಯಂತ್ರಣವಿಲ್ಲದ್ದನ್ನು ದೇವರ

ಪರಾಂಮರಿಕೆಗೆ ಒಪ್ಪಿಸಿದಳು.

ಎರಡನೇಯದಾಗಿ, ದೇವರಿಗೆ ಸಮುವೇಲನನ್ನು ಪ್ರತಿಷ್ಠಿಸಿ ಏಲಿಗೆ ಒಪ್ಪಿಸಿಕೊಡುವದರ ಮೂಲಕ ಅವಳು ತನ್ನ ನಂಬಿಕೆಯನ್ನು ನಿರೂಪಿಸಿ ತೋರಿಸಿ ದಳು (2:1-10). 1 ಸಮುವೇಲ 1:27 ಅತ್ಯುನ್ನತವಾದ ಆತ್ಮ ವಿಶ್ವಾಸದ ಮಾತುಗಳನ್ನು ಒಳಗೊಂಡಿದೆ: "ಈ ಮಗನಿಗಾಗಿ ನಾನು ಬೇಡಿಕೊಂಡೆ, ದೇವರು ನನ್ನ ಭಿನ್ನಹವನ್ನು ಕೇಳಿದ್ದಾನೆ." ಹನ್ನಳ ಸ್ತೋತ್ರ ಗೀತೆಯು (2:1ff.) ಆಕೆಯ ಆಳವಾದ ನಂಬಿಕೆಯನ್ನು ಸಾರುತ್ತದೆ. ಹಳೆ ಒಡಂಬಡಿಕೆಯಲ್ಲಿ ಎಲ್ಲಿಯೂ ಕಾಣದ ಆದರೆ ಹೊಸ ಒಡಂಬಡಿಕೆಯ (ಲೂಕ 1:46ff.) ಮರಿಯಳ ಗೀತೆಯಲ್ಲಿಯ ಆತ್ಮದ ಕೋಮಲತೆ ಮತ್ತು ಭಕ್ತಿಯ ಆನಂದವನ್ನು ತೋರಿಸುತ್ತದೆ. ದೇವರು ಪರಿಶುದ್ಧನು, ಸರ್ವಶಕ್ತನು, ಜ್ಞಾನಿಯೂ ಮತ್ತು ಅತ್ಯುನತ್ತ ನ್ಯಾಯಾಧಿಪತಿಯು ಎಂದು ಹನ್ನಳ ಈ ಗೀತೆ ಪ್ರತಿಬಿಂಬಿಸುತ್ತದೆ.

ಮೂರನೇಯದಾಗಿ, ಸಮುವೇಲನನ್ನು ಆಲಯದಲ್ಲಿ ಬಿಡುವದರ ಮೂಲಕ ತನ್ನ ನಂಬಿಕೆಯನ್ನು ಆಕೆ ನಿರೂಪಿಸಿದಳು (1:28; 2:11). ಅವನು ಕೇವಲ ಮೂರು ವರ್ಷದವನು! ಅವಳು ಭಯಪಡಲಿಲ್ಲ. ಅವನನ್ನು ದೇವರ ಕೃಪಾಹಸ್ತಕ್ಕೆ ಒಪ್ಪಿಸಿದಳು.

ಹನ್ನಳ ನಂಬಿಕೆಯು ನಮಗೆ ಇಬ್ರಿಯ 4:16 ಮತ್ತು 1 ಪೇತ್ರ 5:7ರಲ್ಲಿನ ಸತ್ಯಗಳ ಕುರಿತು ಚೆಲ್ಲುತ್ತದೆ.

**ಸಂಕಷ್ಟದ ಸಮಯದಲ್ಲಿ ತಾಳ್ಮೆಯದಲ್ಲಿ ತಾಳ್ಮೆಯ ಗುಣ (1:7)**

ಅವಳು ಎಷ್ಟು ಸಮಯದವರೆಗೆ ಬಂಜೆಯಾಗಿದ್ದಳೆಂದು ನಮಗೆ ಗೊತ್ತಿಲ್ಲ. ಆಕೆಯು ಕೀರ್ತನೆ 142:4ಬಿ ನೇ ವಚನವನ್ನು ಯಾವಾಗಲೂ ಅನುಭವಿಸುತ್ತಿದ್ದದರಲ್ಲಿ ಯಾವ ಸಂಶಯವಿಲ್ಲ: "ನನಗೆ ಬಿಡುಗಡೆಯಿಲ್ಲ." ದೇವರು ಅವಳನ್ನು ಬಿಟ್ಟು ಎಲ್ಲರೊಂದಿಗೆ ಉತ್ತಮ ವಾದದ್ದನ್ನೆ ಮಾಡಿದನೆಂದು ತೋರುತ್ತಿತ್ತು. ದೇವರು ಒಂದು ದೊಡ್ಡ ತಪ್ಪನ್ನು ಮಾಡಿದ್ದಾನೆಂದು ಅವಳು ಸರಳವಾಗಿ ನಂಬಬಹುದಾಗಿತ್ತು. ಪೆನಿನ್ನಳ ಕ್ರೂರ ಮಾತುಗಳು ಸಾಮ್ಯಳಾದ ಹನ್ನಳ ಜ್ಞಾನವನ್ನು ಮೀರಿದ್ದಾಗಿತ್ತು. ಆಕೆ ಏನು ಮಾಡಬಹುದು? ಆಕೆ ತಾಳ್ಮೆಯಿಂದ ಕಷ್ಟವನ್ನು ಸಹಿಸಿದಳು. ಈ ತಾಳ್ಮೆಯು ಅವಳ ನಂಬಿಕೆಯನ್ನು ಆಳಕ್ಕೆ ನಡೆಸಿತು ಮತ್ತು ಅವಳಲ್ಲಿ ನೀರಿಕ್ಷೆ ಹುಟ್ಟಿಸಿತು.

**ತನ್ನ ಮಕ್ಕಳ ವಿಷಯದಲ್ಲಿ ಭಕ್ತಿಯ ಗುಣ (1:22; 2:19)**

ಸಮುವೇಲನಿಗೆ ಅವಳು ತನ್ನನ್ನು ಅರ್ಪಿಸಿದಳು. ಬಹು ವಿವೇಕದಿಂದ ಅವನನ್ನು ಬೆಳೆ ಸಿದಳು. ಅವನಿಗಾಗಿ ಪ್ರಾರ್ಥಿಸಿ ಅವನ ಆಲೋಚನೆಗಳನ್ನು ದೇವರ ಕಡೆಗೆ ನಡೆಸಿದಳು. ತನ್ನ ಮಗನನ್ನು ಬೆಳೆಸುವದು ಹನ್ನಳಿಗೆ ದೇವರ ಸೇವೆಗೆ ಪ್ರತಿಷ್ಠಿಸಿಕೊಂಡಂತಿತ್ತು. ತಾಲ್ಮಡಿನಲ್ಲಿ ತಿಳಿಸಿದ ಅಂಶವನ್ನು ಇಂದಿನ ನವಯುಗದ ತಾಯಿಯಂದಿರು ನೆನಪಿನಲ್ಲಿಡಬೇಕು. "ಯಾರು ಉತ್ತಮವಾಗಿ ಕಲಿಯಬಹುದು? ಅವನ ತಾಯಿಯಿಂದ ಶಿಕ್ಷಿತನಾದವನೇ!" ಹನ್ನಳು ಪ್ರತಿವರ್ಷ ತರುತ್ತಿದ್ದ ಆ ಬಣ್ಣದ ಅಂಗಿಯು ಅವಳ ಭಕ್ತಿಯನ್ನು ತೋರಿಸುತ್ತದೆ. ಅದು ಅಖಂಡವಾಗಿ ಹೆಣೆಯಲ್ಪಟ್ಟ ಉಣ್ಣೆಯ ಒಳ ಅಂಗಿಯಾಗಿತ್ತು. ಈ ಅಂಗಿಯ ಮೇಲೆ ಯಾಜಕರು ಎಫೋದನ್ನು ಧರಿಸುತ್ತಿದ್ದರು. ಪ್ರತಿ ವರ್ಷವೂ ಸಮುವೇಲನು ತನ್ನ ತಾಯಿ ಭಕ್ತಿಯನ್ನು ಸೂಚಿಸುವ ಬಣ್ಣದ ಅಂಗಿಗಾಗಿ ಕಾಯುತ್ತಿದ್ದನು.

**ತ್ಯಾಗದ ಗುಣ (1:28)**

ತನ್ನ ಅತ್ಯಮೂಲ್ಯವಾದ ಬಹುಮಾನವನ್ನು ದೇವರಿಗೆ ಸಂತೋಷವಾಗಿ ಕೊಟ್ಟುಬಿಟ್ಟಳು. ತನ್ನ ಚಿತ್ತವನ್ನು ಯಾವ ಹಿಡಿತವಿಲ್ಲದೇ ಅರ್ಪಿಸಿದಳು. ತನ್ನನ್ನು ದೇವರಿಗೆ ಪುನಃ

ಸಮರ್ಪಿಸಿದಳು. ತನ್ನ ಪ್ರತಿಜ್ಞೆಯಲ್ಲಿ ದೇವರ ಮಹಿಮೆಯನ್ನೇ ಬಯಸಿದಳು. ಸಮುವೇಲನಿಗೆ ಉತ್ತಮವಾದದ್ದು ಸಿಕ್ಕುವದಕ್ಕಾಗಿ ಹನ್ನಳು ತನ್ನ ಅವಶ್ಯಕತೆಗಳನ್ನು ಸ್ವಯಿಚ್ಛೆಯಿಂದ ಮತ್ತು ಪ್ರೀತಿಯಿಂದ ತ್ಯಾಗ ಮಾಡಿದಳು.

**ಪಾಲನೆ ಪೋಷಣೆಯ ಗುಣ (1:28)**

ಅವನು ಸದಾಕಾಲಕ್ಕೂ ದೇವ ಮಂದಿರದಲ್ಲಿ ವಾಸಿಸಬೇಕೆಂಬುದೇ ಆಕೆಯ ಗುರಿಯಾಗಿತ್ತು (1:22). ಆಕೆಯು ತನ್ನ ಮಗುವನ್ನು ಒಂದು ಭರವಸೆ ಎಂದು ತಿಳಿದಳೇ ಹೊರತು ಬಹುಮಾಮವಾಗಿ ಅಲ್ಲ. ಅವಳ ಸ್ಥಾನದಲ್ಲಿ ಅವಳಿಗೆ ಬಹಳ ಜವಾ ಬ್ದಾರಿಗಳಿದ್ದವು, ಅದಕ್ಕೆ ತಕ್ಕ ಹಾಗೆ ನಂಬಿಗಸ್ಥಳಾಗಿ ಕಾರ್ಯ ಮಾಡಿದಳು. ಮಗನನ್ನು ಬೆಳೆಸುವದು ಮಾತ್ರ ತನ್ನ ಕರ್ತವ್ಯವೆಂದು ತಿಳಿಯದೇ, ದೇವರಿಗೋಸ್ಕರ ಒಬ್ಬ ಸೇವಕನನ್ನು ಮತ್ತು ನಾಯಕನನ್ನು ಕೊಡುತ್ತಿದ್ದೇನೆಂದು ತಿಳಿದಳು! ಇಂಥ ತಿಳುವಳಿಕೆ ಇಂದು ಎಲ್ಲ ತಾಯಂದಿರಲ್ಲಿರಬೇಕು. ಒಬ್ಬ ತಾಯಿಚ್ಛೆಯಾಗಿ ಹನ್ನಳು ಯಶಸ್ವಿಯಾ ದಳು. ಅವಳ ಮಗನು ದೇವರ ಮಂದಿರದಲ್ಲಿ ಬೆಳೆದ ನೆಂದು ಹನ್ನಳ ಚರಿತ್ರೆಯ ಅಂತ್ಯ ಭಾಗ ದೃಢಪಡಿಸುತ್ತದೆ (2:21).

## ಸ್ಮಾರಕದ ಪಾಠಗಳು

ಹನ್ನಳ ತಾಯ್ತನದಿಂದ ನಾವು ನಿತ್ಯಕಾಲಕ್ಕೂ ಬೆಲೆ ಇರುವ ಪಾಠಗಳನ್ನು ಕಲಿಯಬಹುದು.

*ನೆನಪಿಡಿರಿ: ತಾಯಿಯ ಪಾತ್ರ ಬಹು ಪ್ರಾಮುಖ್ಯವಾಗಿದೆ!* ಒಬ್ಬ ತಾಯಿಯ ನಂಬಿಕೆ ಮಕ್ಕಳಿಗೆ ನೆಲೆಗೊಳ್ಳುತ್ತದೆ. ಅವಳ ನಂಬಿಕೆಯು ಬಲವಾಗಿದ್ದರೆ ಅದು ಮೊಳಕೆ ಯೊಡೆಯುತ್ತದೆ ಮತ್ತು ಬೆಳೆಯುತ್ತದೆ. ತಾಯಿಯ ಮನೋಧರ್ಮ ಅವಳ ಮಕ್ಕಳಲ್ಲಿ ಪ್ರತಿಬಿಂಬಿಸುತ್ತದೆ. ತಾಯಂದಿರೆ, ನೀವು ನಿಮ್ಮ ಮಕ್ಕಳಿಗೆ ದೇವರ ವಿಷಯದಲ್ಲಿ ಸೂಕ್ಷ್ಮತೆ, ಅಪಾರವಾದ ನಂಬಿಕೆ ಮತ್ತು ನಿಸ್ವಾರ್ಥ ಸೇವೆಯನ್ನು ಕಲಿಸಿಕೊಟ್ಟಿದ್ದೀರೋ? ಶೋಧ ನೆಯ ಸಮಯದಲ್ಲಿ ಅವರು "ತಾಯಿಯ ಆಲೋಚನೆಗಳಲ್ಲಿ" ಸುಭದ್ರತೆಯನ್ನು ಪಡೆಯು ತ್ತಾರೋ? ಮಕ್ಕಳು ಎನನ್ನು ಗಮನಿಸುತ್ತಾರೋ ಅದನ್ನು ಅನುಸರಿಸುತ್ತಾರೆ. ಸೌಮ್ಯ ಸ್ವಭಾವ, ಗೌರವ ಭಾವನೆ ಮತ್ತು ಶುದ್ಧತೆಯ ಗುಣಗಳನ್ನು ಮಕ್ಕಳು ಅನುಕರಿಸುವಂತೆ ತಾಯಂದಿರು ಅವುಗಳನ್ನು ತಮ್ಮ ಜೀವಿತದಲ್ಲಿ ರೂಢಿಸಿಕೊಳ್ಳಲಿ!

*ನೆನಪಿಡಿರಿ: ದೇವರಲ್ಲಿ ಒಬ್ಬ ಸ್ತ್ರೀಯ ನಿಶ್ಚಿಂತ ನಂಬಿಕೆ ಮತ್ತು ಸೌಮ್ಯ ಭಾವ, ಅವಳ ಪತಿ ಮತ್ತು ಮಕ್ಕಳ ಜೀವಿತದಲ್ಲಿ ಸಿಹಿಯನ್ನು ತರುತ್ತದೆ.* ದೇವರು ತಮಗೆ ಮಾಡಲು ಕೊಟ್ಟ ಪಾತ್ರದಲ್ಲಿ, ತಾಯಂದಿರು ಮೃದು ಮಾತುಗಳಿಂದಲೂ ಮತ್ತು ತಾಳ್ಮೆ ಕರುಣೆಗಳಿಂದಲೂ ತಮ್ಮ ಮನೆಯನ್ನು "ಸುಂದರವಾದ ಮನೆಗಳಾಗಿ" ಪರಿವರ್ತಿಸವರು!

*ನೆನಪಿಡಿರಿ: ತಾಂಯದಿರು ತಮ್ಮ ಮಕ್ಕಳನ್ನು ದೇವರಿಗಾಗಿ ಪೋಷಿಸಬೇಕು.* ದೇವರಲ್ಲಿ ಭಕ್ತಿಯನ್ನು ತಾಯಂದಿರು ತಮ್ಮ ಮಕ್ಕಳಲ್ಲಿ ಮನದಟ್ಟು ಮಾಡಬೇಕು. ಅವರು ದೇವರ ಕುರಿತಾದ ಬೋಧನೆಗಳನ್ನು ಮತ್ತು ಆತನ ಅಧಿಕಾರದ ಕುರಿತು ತಿಳಿಸಬೇಕು. ಪ್ರತಿದಿನ ದೇವರ ಚಿತ್ತಕ್ಕೆ ವಿಧೇಯರಾಗುವ ಆನಂದವನ್ನು ಮತ್ತು ಪರಿಶದ್ಧ ಪರ್ವತನೆ ಹಾಗೂ ಗುಣ ಲಕ್ಷಣಗಳಲ್ಲಿಯ ಆನಂದವನ್ನು ತನ್ನ ಮಕ್ಕಳಿಗೆ ಹೇಳಿಕೊಡುವ ತಾಯಿ ಧನ್ಯಳು.

## ಮುಕ್ತಾಯ

ಹವಳದ ಸಾಲುಗಳು ಶ್ರೇಷ್ಠವಾದ ಸ್ಮಾರಕವಾಗಿದೆ. ಅವುಗಳ ಸೌಂದರ್ಯ ಮತ್ತು ವಿಸ್ತಾರ ಅತಿಶಯವಾಗಿದೆ. ಹವಳವು ಜೀವವಿರುವಾಗಲೇ ಉತ್ಪಾದಿಸುವ ದ್ರವ್ಯದಿಂದ ಉಂಟಾಗುವ ಅಸ್ತಿಪಂಜರದಿಂದ ನಿರ್ಮಿಸಲ್ಪಟ್ಟಿವೆ. ಈ ಮಹಾ ಸಾಲುಗಳು ಒಂದು ಉತ್ತಮವಾದ ಜೀವಿತಕ್ಕೆ

ಸ್ಮಾರಕವಾಗಿದೆ. ನಾಶವಾಗದ ಅವುಗಳ ಅಸ್ತಿತ್ವಕ್ಕೆ ಎಂದಿಗೂ ಮುರಿಯದ ದಾಖಲೆ ಇರುವದು. ಹನ್ನಳಂತ ದೈವಭಕ್ತಿವುಳ್ಳ ತಾಯಿಯ ಕುರಿತು ಇದೇ ತರವಾದ ಸ್ಮಾರಕವಿದೆ!

ತಾಯಂದಿರೆ, ನಿಮ್ಮ ಜೀವಿತವೂ ಆನಂದ ಮತ್ತು ಸಂತೋಷಕ್ಕೆ ಒಂದು ಸ್ಮಾರಕವಾಗಿರುವಂತೆ ಎಚ್ಚರವಹಿಸಿರಿ. ಎಂದಿಗೂ ಬಿದ್ದು ಹೋಗದ ನಂಬಿಕೆ, ಪರಿಶೋಧನೆಗಳು ಬರುವಾಗ ತಾಳ್ಮೆ, ಇತರರ ವಿಷಯದಲ್ಲಿ ಗೌರವ ಮತ್ತು ದೇವರ ವಿಷಯದಲ್ಲಿ ಎಂದಿಗೂ ಸೋತು ಹೋಗದ ಬದ್ಧತೆಯನ್ನು ಮಕ್ಕಳಿಗೆ ಕಲಿಸಿಕೊಡುವದರಲ್ಲಿ ನಿಮ್ಮ ಶಕ್ತಿಯನ್ನು ಉಪಯೋಗಿಸಿರಿ, ತಾಯಂದಿರೆ, ಮಕ್ಕಳನ್ನು ಪಾಲಿಸುವದರಲ್ಲಿ ಹನ್ನಳಂತೆ ನಿಮ್ಮ ಗುರಿಯಿರಲಿ. "ನಾನು ಅವನನ್ನು ಯೆಹೋವನಿಗೆ ಪ್ರತಿಷ್ಠಿಸುವೆನು. ಅವನು ಬದುಕಿರುವ ಕಾಲವೆಲ್ಲ ಯೆಹೋವನಿಗೆ ಪ್ರತಿಷ್ಠಿತನಾಗಿರಲಿ" (1:28).